not necessary that it must be done by legislation ?

Sri A. G. RAMACHANDRA RAO.— It has considered it to be not necessary.

Sri A. G. RAMACHANDRA RAO.— Sir, I think questions Nos. 172 and 183 which are alike may be taken up together.

Mr. SPEAKER.—Yes, both may be taken up.

Expenditure on Adult Education Scheme.

Q.—172. **Sri K. V. BYRE GOWDA** (Bangalore North).—

Will the Government be pleased to state :—

(*a*) the amount spent on Adult Education scheme in the State annually;

(*b*) whether they consider the giving up of that scheme ;

(*c*) the total literates so far produced ?

A.—**Sri A. G. RAMACHANDRA RAO** (Minister for Law and Education.)—

(*a*) Rs. 5 lakhs.

(*b*) No.

(*c*) 2,62,705 (up to 1950-51).

Expenditure on Adult Education Council.

Q.—183. **Sri A. V. NARASIMHA REDDY** (Bangalore South).—

Will the Government be pleased to state :—

(*a*) the year in which the non-official Adult Education Council was started and the amount given in aid every year;

(*b*) the amount of work it has done during these years ?

A.—**Sri A. G. RAMACHANDRA RAO** (Minister for Law and Education).—

(*a*) 1941-42.

Year		*Amount*
1941-42	...	5,500
1942-43	...	17,733
1943-44	...	8 ,500
1944-45	...	1,52,500
1945-46	...	3,00,500
1946-47	...	4,71,000
1947-48	...	3,60,000
1948-49	...	4,40,000
1949-50	...	3,80,000
1950-51	...	3,95,799
1951-52	...	Figures not yet available.

(*b*) Statement appended below.

Mysore State Adult Education Council.

Particulars	1941—42	1942—43	1943—44	1944—45	1945—46	1946—47
1. No. of literacy classes	178	488	1,227	2,204	4,530	3,941
2. No. of literates declared	2,253	6,201	7,076	13,638	50,817	44,265
3. No. of rural libraries (progressive totals) ..	...	...	203	430	1,220	1,616
4. No. of central libraries (progressive totals)	...	...	...	...	...	...
5. No. of Adult Education Booklets distributed	...	1,200	88,080	114 608	144,212	65,187
6. No. of text books distributed ...	3,250	20,400	77,050	132,517	359,251	145,773
7. No. of subscribers to 'Belaku' ...	...	1,200	3,500	3,756	5,020	5,800
8. No. of subscribers to 'Pustaka Prapancha'	...	...	...	...	...	600
9. Trainees in Nanjangud Vidyapeetha ..	...	...	...	...	...	...
10. No. of G. E. Programmes arranged ...	...	...	...	...	...	...
11. No. of Social Service Camps ..	...	...	...	...	...	...

Particulars	1947—48	1948—49	1949—50	1950—51	1951—52
1. No. of literacy classes	4,557	4,240	3,784	2,396	Details not yet available.
2. No. of literates declared	34,327	34,022	34,175	35,931	
3. No. of rural libraries (progressive totals) ...	1,812	1 941	1,966	2,031	
4. No. of central libraries (progressive totals)	4	4	5	6	
5. No. of Adult Education Booklets distributed	86.734	95,845	73,014	15,039	
6. No. of text books distributed ...	205,065	190,800	170,280	107,82	
7. No. of subscribers to 'Belaku' ...	5,886	5,740	5,235	4,044	
8. No. of subscribers to 'Pustaka Prapancha'	613	829	907	800	
9. Trainees in Nanjangud Vidyapeetha	24	63	29	12	Only one batch.
10 No. of G. E. Programmes arranged ...	...	220	159	250	
11. No. of Social Service Camps ...	...	22	20	23	

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ವಯಸ್ಕರ ಶಿಕ್ಷಣ ಸಂಸ್ಥೆಯಲ್ಲಿನ ಉಪಾಧ್ಯಾಯರುಗಳನ್ನು ನೇಮಿಸಲು ಏನಾದರೂ ಒಂದು ಏರ್ಪಾಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದಕ್ಕಾಗಿ ಒಂದು ಸಂಸ್ಥೆಯಿದೆ. ಖಾಸಗಿ ಸಂಸ್ಥೆ ಅದು. ಆ ಸಂಸ್ಥೆಯ ಮುಖಾಂತರ ನಡೆಯುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು. ಅಲ್ಲಿನ ಕೌನ್ಸಿಲ್ ಅಧ್ಯಕ್ಷರಿಗೇನಾದರೂ ಏನೋರೀರಿಯಂ ಕೊಡುತ್ತಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗೆ ಕೊಡುತ್ತಿರುವುದೇನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಇಡೀ ದೇಶದಲ್ಲಿ ಈ ವಯಸ್ಕರ ಶಿಕ್ಷಣಸಮಿತಿಯವರು ಮಾಡುತ್ತಿರುವ ಅಕ್ಷರ ಪ್ರಚಾರ ಇತ್ಯಾದಿ ಕೆಲಸಗಳು ಅಷ್ಟು ಸಂತೃಪ್ತಿಕರವಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು. ಈಗ Non-official ಒಬ್ಬರು ವಯಸ್ಕರ ಶಿಕ್ಷಣಸಮಿತಿಯಲ್ಲಿ ಚೇರ್ಮನ್ನರಾಗಿರುವುದನ್ನು ತಪ್ಪಿಸಿ Official Chairman ರೊಬ್ಬರನ್ನು ನೇಮಕಮಾಡುವುದು ತಮ್ಮ ಆಲೋಚನೆಯಲ್ಲಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಮುಂದೆ ಯಾವ ಏರ್ಪಾಡು ಮಾಡಬೇಕೆಂಬುದು ಆಲೋಚನೆಯಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ವಯಸ್ಕರ ವಿದ್ಯಾಭ್ಯಾಸ ಸಮಿತಿಯವರು ಮಾಡುತ್ತಿರತಕ್ಕ ಕೆಲಸಕ್ಕೂ ಅವರ ಮೇಲೆ ಸರ್ಕಾರದವರು ಖರ್ಚುಮಾಡುವ ಹಣಕ್ಕೂ ಹೋಲಿಸಿದರೆ ನ್ಯಾಯವಾದ ಪ್ರತಿಫಲ ದೊರೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಕೆಲವು ವಿಭಾಗಗಳು ಸಮರ್ಪಕವಾಗಿ ಕೆಲಸಮಾಡುತ್ತಿವೆ; ಇನ್ನು ಕೆಲವು ಅಷ್ಟಾಗಿ ಮಾಡುತ್ತಿಲ್ಲ. ಈ ವಿಷಯದಲ್ಲಿ ಸರಿಯಾದ Perspective ಇಟ್ಟುಕೊಂಡು ನಮ್ಮ ವಯಸ್ಕರ ವಿದ್ಯಾಭ್ಯಾಸ ಪದ್ಧತಿಯನ್ನು ಪರಿಶೀಲಿಸಿದ ಬೇವೂರ್‌ರವರು ಕೊಟ್ಟಿರುವ ಸ್ಟೇಟ್‌ಮೆಂಟ್‌ನ್ನು ನೋಡಬೇಕು. UNESCO ವಿನಲ್ಲಿ Fundamental Education ಮೇಲೆ ಅವರು ಮಾಡಿದ ಭಾಷಣ 17ನೆಯ ಮಾರ್ಚಿನಲ್ಲಿ All-India Radioದಲ್ಲಿ ಪ್ರಕಟವಾಗಿ ಅದರಲ್ಲಿನ ಕೆಲವು ಭಾಗಗಳನ್ನು ಓದಿದರೆ ಸರಿಯಾದ background ತಮಗೆ ಗೊತ್ತಾಗುತ್ತದೆ.

"Here, in the State of Mysore, the Adult Education Council is doing magnificent work in the quarters of the towns and outside, in the country villages. It is included among more than thirty important Organisations and Projects of Fundamental Education all over the world which are officially associated with UNESCO.....

I am specially impressed by the way in which the Adult Education Council works together with the Government Rural Development authorities.....

I have been deeply impressed by the Adult Education classes and the Vidyapeeth centres which I have seen. I have been impressed because the Adult Education Council has provided more than mechanical literacy.

'UNESCO has already recognised the international value of the experience which Mysore has gained by borrowing three of its leading Adult Education Experts to work with UNESCO's department of Education in Paris and with the Governments of Ceylon and Philippines.

There is no lack of the highest qualities in those who are managing this Scheme, but if they are to solve the great problem of illiteracy in the State of Mysore, and if they are to build foundations of social and economic progress in the minds of the rural people, they will need the support of every person in the State.

I shall return to Paris to work in my office refreshed by a contact with the work of Adult Education and Rural Development in Mysore, inspired by a sense of real achievement and with renewed faith in the world movement of Funda ental Education to lay the foundations of progress in the minds of men."

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈಗ UNESCOವಿಗೆ ನಮ್ಮ ಮೈಸೂರು ವಿದ್ಯಾಭ್ಯಾಸದ ಕೌನ್ಸಿಲಿನಿಂದ ಮೂರು ಪ್ರತಿನಿಧಿಗಳನ್ನು ತೆಗೆದುಕೊಂಡಿದೆಯೆಂದು ಹೇಳಿದಿರಿ. ಅವರು ಯಾರು?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೆಸರುಗಳೆಲ್ಲಾ ಪೂರ್ತಿಯಾಗಿ ಗೊತ್ತಿಲ್ಲ. ಒಬ್ಬರು ಕೃಷ್ಣಮೂರ್ತಿಯವರು.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈಗ ವಯಸ್ಕರ ವಿದ್ಯಾಭ್ಯಾಸದ ಕೌನ್ಸಿರ್‌ನವರಲ್ಲಿ ನಡೆಸತಕ್ಕ ಶಾಲೆಗಳಲ್ಲಿ ಸಾಮಾನ್ಯವಾಗಿ ಪ್ರೈಮರಿ ಸ್ಕೂಲಿನಲ್ಲಿ ಓದಿದ್ದವರನ್ನೇ ಸೇರಿಸಿಕೊಂಡು ಅವರಿಗೆ ಪಾಠ ಹೇಳುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂಥವರೂ ಕೆಲವರಿರಬಹುದು. ಹೆಚ್ಚಾಗಿ ಓದಿದವರೇ ಪಾಠ ಹೇಳುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸೋಷಿಯಲ್ ವರ್ಕ್ ಬೇರೆ ಮಾಡುತ್ತಿದ್ದಾರೆಂದು ಹೇಳಿದಿರಿ. ಆ ಸೋಷಿಯಲ್ ವರ್ಕ್‌ಗಳೇನು?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದನ್ನೆಲ್ಲಾ ಪರಿಶಿಷ್ಟದಲ್ಲಿ ಕೊಟ್ಟಿದೆ. ಲೈಬ್ರರಿಗಳನ್ನು ನಡೆಸು

ವುದು, ಪ್ರಚಾರ ಭಾಷಣಗಳನ್ನು ಮಾಡುವುದು, ಸಿನಿಮಾ ಪ್ರದರ್ಶನಗಳನ್ನು ತೋರಿಸುವುದು—ಇಂಥ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಇಡೀ ಸಂಸ್ಥಾನದಲ್ಲಿ ಈ ಲೈಬ್ರರಿಗಳಲ್ಲಿ ಅನೇಕವು ಸರಿಯಾಗಿ ಕೆಲಸ ಮಾಡುತ್ತಿಲ್ಲ; ಇದರಿಂದ ವಯಸ್ಕರ ವಿದ್ಯಾಭ್ಯಾಸ ಶಿಕ್ಷಣ ಪಡೆದವರಿಗೆ ಏನೇನೂ ಉಪಯೋಗವಾಗುತ್ತಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri A. G. RAMACHANDRA RAO.—That is a matter of opinion.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈಗಲಾದರೂ ಈ adult literacy ಕೌನ್ಸಿಲ್ಲನ್ನು ರದ್ದುಗೊಳಿಸುವ ವಿಚಾರವನ್ನು ಪರಿಶೀಲಿಸುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ನನು ಮೊದಲೇ ಹೇಳಿದಂತೆ ಅದನ್ನು ಯಾವರೀತಿ ರೂಪುಗೊಳಿಸಬೇಕೆಂಬುದು ಯೋಚನೆಯಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಸೋಷಿಯಲ್ ಸರ್ವಿಸ್ ಕ್ಯಾಂಪುಗಳ ದು ಇಲ್ಲಿ ಹೇಳಿದ್ದೀರಿ. ಪ್ರತಿಯೊಂದು ಸೋಷಿಯಲ್ ಸರ್ವಿಸ್ ಕ್ಯಾಂಪಿಗೂ ಎಷ್ಟು ಹಣ ಖರ್ಚುಮಾಡುತ್ತಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅವುಗಳಿಂದ ಲೆಕ್ಕ ತರಿಸಿ ಎಷ್ಟು ಖರ್ಚಾಗಿದೆಯೆಂದು ಹೇಳಬೇಕು. ನೋಟೀಸ್.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಇಲ್ಲಿ 'Adult Education Booklets distributed' ಎಂದು ಹೇಳಿದ್ದೀರಿ. ಅಂದರೆ adult literacy lecturers ಗಳನ್ನು ಈಗ ತೆಗೆಯಬಿಟ್ಟಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ; ಅದೂ ಪ್ರಾಮುಖ್ಯವಾಗಿದೆ.

ಶ್ರೀ ಜಿ. ಶಿವಪ್ಪನವರು.—ಅದನ್ನು ತೆಗೆಯಬೇಕೆಂದೇನಾದರೂ ಯೋಚನೆಯಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ, ಇಲ್ಲ.

ಶ್ರೀ ಜಿ. ಶಿವಪ್ಪನವರು.—ಹಾಗಾದರೆ Propaganda ಕಾರ್ಯಕ್ರಮ ಈಗಲೂ ಉಂಟೇ?

Sri A. G. RAMACHANDRA RAO.—In all its bearings it will be considered.

ಶ್ರೀ ಜಿ. ಶಿವಪ್ಪನವರು.—Propaganda work ಉಂಟೇ ಎಂದು ನಾನು ಕೇಳಿದ್ದು. ಅದಕ್ಕಾಗಿ ಹೆಚ್ಚಿಗೆ ಹಣ ಖರ್ಚುಮಾಡುತ್ತಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂಕಿ ಅಂಶಗಳನ್ನು ಈಗಾಗಲೇ ಕೊಟ್ಟಿದ್ದೇವೆ.

ಶ್ರೀ ಜಿ. ಶಿವಪ್ಪನವರು.—ನಾನೇಕೆ ಹೇಳುತಿದ್ದೇನೆಂದರೆ, ಇತರ ಇಲಾಖೆಗಳ ಸಂಬಂಧದಲ್ಲಿ ನಡೆಸತಕ್ಕ Propaganda ಗಳಿಗಾಗಿ ಸರ್ಕಾರದವರು ಹೆಚ್ಚಿಗೆ ಖರ್ಚುಮಾಡುತ್ತಿದ್ದೀರಿ. ಇದಕ್ಕೂ ಹಾಗೆಯೇ ಖರ್ಚು ಮಾಡುತ್ತಿದ್ದೀರಾ?

Mr. SPEAKER.—These figures are furnished I suggest that members can take this information and they may offer their suggestions during the course of budget discussion.

Sri N. C. NAGIAH REDDY (Goribidnur).—Has it come to the notice of the Government that this expenditure is sheer waste of money?

Sri A. G. RAMACHANDRA RAO.—It is purely a matter of opinion.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಅಡಲ್ಟ್ ಲಿಟರೆಸಿ ಸೂಪರ್ ವೈಸರ್‌ಗಳೆಂದು ತಾಲ್ಲೂಕುಗಳಲ್ಲಿದ್ದಾರಲ್ಲಾ. ಅವರಸ್ಲೇಟು ಬುಕ್ಕುಗಳನ್ನೆಲ್ಲಾ ಮಾರಿಕೊಳ್ಳುತ್ತಿದ್ದಾರೆಂಬ ದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು.—ಹಾಗೇನಾದರ ನಡೆದಿರುವುದು ತಮ್ಮ ಗಮನಕ್ಕೆ ಬಂದರೆ ಅವರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಖಂಡಿತವಾಗಿ

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—172 ನೆಯ ಪ್ರಶ್ನೆಯ (ಬಿ) ಭಾಗಕ್ಕೆ 'No' ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಕಾರಣವೇನೆಂದು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಬಹಳ ಉಪಯುಕ್ತವಾಗಿದೆಯೆಂದು ಭಾವನೆಯಿದೆ.

ಶ್ರೀ ಎಂ. ಲಿಂಗಣ್ಣನವರು.—ಎರಡು ಲಕ್ಷ ಚಿಲ್ಲರೆ ಯಷ್ಟು ವಯಸ್ಕರಿಗೆ ಓದು ಕಲಿಸಿದೆಯೆಂದು ಹೇಳಿದ್ದೀರಿ. ಈ ಎರಡು ಲಕ್ಷ ಚಿಲ್ಲರೆ ಜನರೂ ತಾವು ಕಲಿತ ಓದನ್ನು ಉಳಿಸಿಕೊಳ್ಳುವುದಕ್ಕೇನಾದರೂ ಮಾರ್ಗವನ್ನು ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಮಾಡಿದೆ. ಲೈಬ್ರರಿಗಳಿವೆ.

ಶ್ರೀ ಎಂ. ಲಿಂಗಣ್ಣನವರು.—ಎಷ್ಟು ಲೈಬ್ರರಿಗಳು ಈಗ ಕೆಲಸ ಮಾಡುತ್ತಿವೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪರಿಷ್ಕೃದಲ್ಲಿ ಕೊಟ್ಟಿದೆ.

ಶ್ರೀ ಎಂ. ಲಿಂಗಣ್ಣನವರು.—ಅಷ್ಟು ಲೈಬ್ರರಿಗಳು ಹಾನಸ್ಥಾನದಲ್ಲಿ ಕೆಲಸ ಮಾಡುತ್ತಿವೆಯೇ?

Sri A. G. RAMACHANDRA RAO.—It is a matter of opinion.

9-30 A.M.

Sri Mulka GOVINDA REDDY (Chitaldrug).—With a view to effecting economy, will the Government abolish the post of Chairman of Adult Literacy Council and transfer the functions to the Director of Public Instruction?

Sri A. G. RAMACHANDRA RAO.—It is a private body which is doing this work.

Sri Mulka GOVINDA REDDY.—Are the Government not paying any emoluments to the Chairman?

Sri A. G. RAMACHANDRA RAO.—Government are not paying.

ಶ್ರೀ ಡಿ ದೇವರಾಜ ಅರಸಿನವರು (ಹುಣಸೂರು).—ಇದುವರೆಗೆ ಈ ವಯಸ್ಕರ ವಿದ್ಯಾಭ್ಯಾಸಕ್ಕೆ ಎಷ್ಟು ರೂಪಾಯಿ ಖರ್ಚಾಗಿದೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎಷ್ಟೆಷ್ಟು ಖರ್ಚಾಗಿದೆ ಎಂಬ ವಿವರಗಳನ್ನು ಉತ್ತರದಲ್ಲಿ ಕೊಟ್ಟಿದೆ.